(

**ಕರ್ನಾಟಕ ಸರ್ಕಾರ**

ಸಂ:ಹಿಂವಕನಿ/ಸಿಬ್ಬಂದಿ-3/ಸಿಆರ್- 133/2015-16

ಆಯುಕ್ತರ ಕಛೇರಿ
ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ
ನಂ.16.ಡಿ ದೇವರಾಜ ಅರಸು ಭವನ, 3ನೇ ಮಹಡಿ,
ಮಿಲ್ಲರ್ಸ್ ಟ್ಯಾಂಕ್‌ಬಂಡ್ ಏರಿಯಾ, ವಸಂತನಗರ,
ಬೆಂಗಳೂರು:-560 052, ದಿನಾಂಕ: 04.1.18

## ಅಧಿಕೃತ ಜ್ಞಾಪನ

**ವಿಷಯ:** ದಿನಾಂಕ:1-1-2017 ಕ್ಕೆ ಅನ್ವಯಿಸುವಂತೆ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯಲ್ಲಿ ಕಾರ್ಯನಿರ್ವಹಿಸುತ್ತಿರುವ **ಹೊಲಿಗೆ ತರಬೇತಿ ಕೇಂದ್ರ ಶಿಕ್ಷಕರ ತಾತ್ಕಾಲಿಕ ಪದಕ್ರಮ** ಪಟ್ಟಿಯನ್ನು ಪ್ರಕಟಿಸುವ ಕುರಿತು.

*********

ಕರ್ನಾಟಕ ಸರ್ಕಾರಿ ನೌಕರರ (ಜೇಷ್ಠತೆ) ನಿಯಮ 1957 ರ ನಿಯಮ 10 ರನ್ವಯ ಪ್ರತಿ ವರ್ಷ ಜೇಷ್ಠತಾ ಪಟ್ಟಿಯನ್ನು ಪ್ರಕಟಿಸಬೇಕಾಗಿರುತ್ತದೆ. ಸರ್ಕಾರದ ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆಯ ಅಧಿಸೂಚನೆಗಳನ್ವಯ ಹೈದರಾಬಾದ್-ಕರ್ನಾಟಕ ನಿಯಮಗಳಂತೆ ಪ್ರತ್ಯೇಕ ವೃಂದದಲ್ಲಿ ಕಾರ್ಯನಿರ್ವಹಿಸುತ್ತಿರುವ ನೌಕರರ ಜೇಷ್ಠತಾ ಪಟ್ಟಿಗಳನ್ನು ಬೇರ್ಪಡಿಸಿ, ರಾಜ್ಯ ಮಟ್ಟದ ಜೇಷ್ಠತಾ ಪಟ್ಟಿ, ಉಳಿಕೆ ಮೂಲ ವೃಂದದ ಜೇಷ್ಠತಾ ಪಟ್ಟಿ ಹಾಗೂ ಹೈದರಾಬಾದ್-ಕರ್ನಾಟಕ ಕರ್ನಾಟಕ ಸ್ಥಳೀಯ ವೃಂದದ ಜೇಷ್ಠತಾ ಪಟ್ಟಿಗಳನ್ನು ಪ್ರಕಟಿಸಿ ನಿರ್ವಹಿಸಬೇಕಾಗಿದೆ.

ಈ ಹಿನ್ನಲೆಯಲ್ಲಿ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಹೊಲಿಗೆ ತರಬೇತಿ ಕೇಂದ್ರ ಶಿಕ್ಷಕರ ತಾತ್ಕಾಲಿಕ ಪದಕ್ರಮ ಪಟ್ಟಿಯನ್ನು ದಿನಾಂಕ: 01.01.2017 ರಲ್ಲಿ ಇದ್ದಂತೆ ಕಾರ್ಯನಿರ್ವಹಿಸುತ್ತಿರುವ ನೌಕರರ ರಾಜ್ಯ ಮಟ್ಟದ ಜೇಷ್ಠತಾ ಪಟ್ಟಿಯನ್ನು ಅನುಬಂಧ-1 ರಲ್ಲಿ ತಯಾರಿಸಿ, ಈ ಅಧಿಕೃತ ಜ್ಞಾಪನದೊಂದಿಗೆ ಲಗತ್ತಿಸಿ ಹೊರಡಿಸಲಾಗಿದೆ.

ಸದರಿ ಪದಕ್ರಮ ಪಟ್ಟಿಗಳನ್ನು ಸಂಬಂಧಪಟ್ಟ ಅಧಿಕಾರಿಗಳು ತಮ್ಮ ಅಧೀನದಲ್ಲಿ ಕಾರ್ಯನಿರ್ವಹಿಸುತ್ತಿರುವ ಹೊಲಿಗೆ ತರಬೇತಿ ಕೇಂದ್ರ ಶಿಕ್ಷಕರಿಗೆ ತಾತ್ಕಾಲಿಕ ಪದಕ್ರಮ ಪಟ್ಟಿಯನ್ನು ಪರಿಚಲಿಸಿ ( ಅನ್ಯ ಕರ್ತವ್ಯದ ಮೇಲೆ ಇತರೆ ಕಛೇರಿ / ಬೇರೆ ಇಲಾಖೆಗಳಲ್ಲಿ ನಿಯೋಜನೆ ಮೇಲೆ ಕಾರ್ಯನಿರ್ವಹಿಸುತ್ತಿರುವವರನ್ನು ಒಳಗೊಂಡು), ಕಡ್ಡಾಯವಾಗಿ ಸದರಿ ನೌಕರರಿಂದಲೇ ಸ್ವೀಕೃತಿಯನ್ನು ಪಡೆದು ಈ ಕಛೇರಿಗೆ ತಪ್ಪದೇ ಕಳುಹಿಸಲು ಸೂಚಿಸಿದೆ.

ಯಾವುದೇ ನೌಕರರು ಈ ಪದಕ್ರಮ ಪಟ್ಟಿಗೆ ಆಕ್ಷೇಪಣೆ ಮಾಡುವುದಿದ್ದಲ್ಲಿ, ಅವರು ಈ ಪದಕ್ರಮ ಪಟ್ಟಿಯನ್ನು ಪಡೆದ 15 ದಿನದೊಳಗಾಗಿ ತಮ್ಮ ಮೇಲಧಿಕಾರಿಗಳ ಮೂಲಕ ಈ ಕಛೇರಿಗೆ ತಲುಪುವಂತೆ ಸಲ್ಲಿಸತಕ್ಕದ್ದು. 15 ದಿನಗಳ ನಂತರ ಸಲ್ಲಿಸಲಾಗುವ ಆಕ್ಷೇಪನೆಗಳನ್ನು ಪರಿಗಣಿಸಲಾಗುವುದಿಲ್ಲ. ಸಂಬಂಧಿಸಿದ ಜಿಲ್ಲಾ ಹಿಂದುಳಿದ ವರ್ಗಗಳ ಅಧಿಕಾರಿಗಳು/ತಾಲ್ಲೂಕು ಹಿಂದುಳಿದ ವರ್ಗಗಳ ವಿಸ್ತರಣಾಧಿಕಾರಿಗಳು, ನೌಕರರು ಸಲ್ಲಿಸಿರುವ ಆಕ್ಷೇಪಣೆಗಳನ್ನು ತಮ್ಮ ಕಛೇರಿಯಲ್ಲಿ ಲಭ್ಯವಿರುವ ಸೇವಾ ಪುಸ್ತಕ ಹಾಗೂ ವೈಯಕ್ತಿಕ ಕಡತ, ಇನ್ನಿತರೆ ದಾಖಲೆಗಳೊಂದಿಗೆ ಪರಿಶೀಲಿಸಿ, ಆಕ್ಷೇಪಣೆಗಳು ಸಮಂಜಸವಾಗಿದ್ದಲ್ಲಿ ಪೂರಕ ದಾಖಲೆಗಳೊಂದಿಗೆ ಸೂಕ್ತ ಶಿಫಾರಸ್ಸಿನೊಂದಿಗೆ

ಸಂಬಂಧಿಸಿದ ನೌಕರರಿಂದ ನಿಗದಿತ ಅವಧಿಯಲ್ಲಿ ಪಡೆದು ಸಲ್ಲಿಸಿದ ದಿನಾಂಕದಿಂದ 15 ದಿನಗಳೊಳಗಾಗಿ ಈ ಕಛೇರಿಗೆ ಸಲ್ಲಿಸುವುದು. ನಿಗದಿತ ಅವಧಿ ಮೀರಿ ಬರುವ ಯಾವುದೇ ಆಕ್ಷೇಪಣೆಗಳನ್ನು ಪರಿಗಣಿಸಲಾಗುವುದಿಲ್ಲ.

**(ವಿ.ಅನ್ಬುಕುಮಾರ್, ಭಾ.ಆ.ಸೇ.,)**
**ಆಯುಕ್ತರು**
**ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ**
**ಬೆಂಗಳೂರು.**

**ಪ್ರತಿಯನ್ನು ಈ ಕೆಳಕಂಡವರಿಗೆ ಮಾಹಿತಿ ಹಾಗೂ ಸೂಕ್ತ ಕ್ರಮಕ್ಕಾಗಿ ಕಳುಹಿಸಿದೆ.**

1. ರಾಜ್ಯದ ಎಲ್ಲಾ ಜಿಲ್ಲಾ ಹಿಂದುಳಿದ ವರ್ಗಗಳ ಕಲ್ಯಾಣ ಅಧಿಕಾರಿಗಳು.
2. ಸಂಬಂಧಿಸಿದ ನೌಕರರಿಗೆ ಮೇಲಾಧಿಕಾರಿಗಳ ಮುಖಾಂತರ
3. ಅ.ಜ್ಞಾ.ಕಡತ/ಕಛೇರಿ ಪ್ರತಿ ಹೆಚ್ಚುವರಿ ಪ್ರತಿ

# ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ

**ದಿನಾಂಕ:01.01.2017 ಕ್ಕೆ ಇದ್ದಂತೆ ಕಾರ್ಯನಿರ್ವಹಿಸುತ್ತಿರುವ ರಾಜ್ಯ ಮಟ್ಟದ ಹೊಲಿಗೆ ತರಬೇತಿ ಕೇಂದ್ರ ಶಿಕ್ಷಕಿಯರ ಅಂತಿಮ ಪದಕ್ರಮ ಪಟ್ಟಿ**

**ಹಿಂವಕಇ/ಸಿಬ್ಬಂದಿ.3/ಸಿಆರ್. 133/2015-16 ದಿನಾಂಕ:. 4 -01-2017 ರ ಅಧಿಕೃತ ಜ್ಞಾಪನಕ್ಕೆ ಅನುಬಂಧ-1**

| ಕ್ರ.ಸಂ | ನೌಕರರ ಹೆಸರು | ಕೆ.ಜಿ.ಐ.ಡಿ ಸಂಖ್ಯೆ | ಕಾರ್ಯನಿರ್ವಹಿಸುತ್ತಿರುವ ತಾಲ್ಲೂಕು | ಜನ್ಮ ದಿನಾಂಕ | ಸೇವೆಗೆ ಸೇರಿದ ದಿನಾಂಕ | ನೇಮಕಾತಿ ವಿಧಾನ | ಮೀಸಲಾತಿ ವರ್ಗ | ಸ್ವಂತ ತಾಲ್ಲೂಕು | ಸ್ವಂತ ಜಿಲ್ಲೆ |
|---|---|---|---|---|---|---|---|---|---|
| 1 | 2 | 3 | 4 | 5 | 6 | 7 | 8 | 9 | 10 |
| 1 | ನಂದ ಕುರಂದವಾಡ್ | 1100864 | ಹುಬ್ಬಳ್ಳಿ | 12-03-63 | 17-10-88 | ನೇರ ನೇಮಕಾತಿ | ಯು.ಆರ್ | ರಾಣಿಬೆನ್ನೂರು | ಹಾವೇರಿ |
| 2 | ಎನ್. ಆರ್ ಮೀನಾಕ್ಷಿ | 1731342 | ಬೆಂಗಳೂರು ಉತ್ತರ | 23-04-64 | 22-10-88 | ನೇರ ನೇಮಕಾತಿ | ಯು.ಆರ್ | ಬೆಂಗಳೂರು ಉತ್ತರ | ಬೆಂಗಳೂರು ನಗರ |
| 3 | ಎಸ್. ಗದಡ್ | 1334813 | ಬಾದಾಮಿ | 06-01-57 | 01-01-90 | ದಿ.ಗೂ.ಸ | ಯು.ಆರ್ | ಬಾದಾಮಿ | ಬಾಗಲಕೋಟೆ |
| 4 | ಪೀಲೋಮಿನ ಪೌಲ್ | 1382541 | ಬೆಳ್ತಂಗಡಿ | 27-06-60 | 19-07-82 | ದಿ.ಗೂ.ಸ | ಯು.ಆರ್ | ಬೆಳ್ತಂಗಡಿ | ದಕ್ಷಿಣ ಕನ್ನಡ |
| 5 | ಎಸ್ ಜಿ ಹದಪಡ್ | 1928599 | ಗೋಕಾಕ್ | 08-01-67 | 29-01-04 | ನೇರ ನೇಮಕಾತಿ/ಅನುಕಂಪ | ಯು.ಆರ್ | ಸವದತ್ತಿ | ಬೆಳಗಾಂ |
| 6 | ಜಯಶ್ರೀ ಮೋಹನ್ ಚಿಂತಾಮಣಿ | 1809692 | ಬಿಜಾಪುರ | 07-01-82 | 17-06-05 | ನೇರ ನೇಮಕಾತಿ/ಅನುಕಂಪ | ಯು.ಆರ್ | ವಿಜಯಪುರ | ವಿಜಯಪುರ |

ಆಯುಕ್ತರು
ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ
ಬೆಂಗಳೂರು